ಪ್ರಾಥಮಿಕ ಕೃ, ಭೂ ಅಭಿವೃದ್ಧಿ ಬ್ಯಾಂಕ್‌ನಿಂದ ರೈತರ ಸಾಲ ಮನ್ನಾ ಮಾಡುವ ವಿಚಾರ.

235 - ಶ್ರೀ ಬಿ. ಶಿವರಾಮು (ಗಂಡಸಿ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನೀರು ಬರದ ಮತ್ತು ನೀರು ಬಂದು ಬತ್ತಿಹೋದ ಬಾವಿಗಳ ಸಾಲ ಮನ್ನಾ ಮಾಡಲು ರೈತರಿಂದ ಕರ್ನಾಟಕ ಭೂ ಅಭಿವೃದ್ಧಿ ಬ್ಯಾಂಕ್ ನಿ, ಬೆಂಗಳೂರುರವರಿಗೆ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು?

ಆ) ಅವುಗಳ ಪೈಕಿ ಮನ್ನಾ ಮಾಡಲ್ಪಟ್ಟಿರುವ ಹಾಗೂ ಮನ್ನಾ ಮಾಡಲು ಇರುವ ಬಾವಿಗಳ ಅರ್ಜಿಗಳ ಸಂಖ್ಯೆ ಎಷ್ಟು?

(1989-90, 90-91,91-92 ವಿವರ ಒದಗಿಸುವುದು)

ಇ) 1991Ë92 ಮತ್ತು 1992-93ರಲ್ಲಿ ಆದಕ್ಕಾಗಿ ಆಯವ್ಯಯದಲ್ಲಿ ಒದಗಿಸಿರುವ ಹಣವೆಷ್ಟು?

ಶ್ರೀಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):

ಅ) ಬಾವಿಗಳ ಸಾಲ ಮನ್ನಾ ಮಾಡಲು ರೈತರಿಂದ ಕರ್ನಾಟಕ ಭೂ ಅಭಿವೃದ್ಧಿ ಬ್ಯಾಂಕ್ ನಿ, ಬೆಂಗಳೂರು ರವರಿಗೆ ದಿನಾಂಕ: 31-3-92ರ ವರೆಗೆ ಒಟ್ಟು 28,571 ಅರ್ಜಿಗಳು ಬಂದಿರುತ್ತದೆ

ಆ) ಅವುಗಳ ಪೈಕಿ ಮನ್ನಾ ಮಾಡಿರುವ ಪ್ರಕರಣಗಳು 23,747 ಇರುತ್ತವೆ. ಮನ್ನಾ ಮಾಡಬೇಕಾಗಿರುವ ಪ್ರಕರಣಗಳು 4824 ಇರುತ್ತವೆ.

ವರ್ಷವಾರು ವಿವರ ಈ ಕೆಳಕಂಡಂತೆ ಇರುತ್ತದೆ.

1)	1989-90	1095
2)	1990-91	1081
3)	1991-92	2648
	ಒಟ್ಟು	**4824**

ಇ) ಈ ಬಗ್ಗೆ ಆಯವ್ಯಯದಲ್ಲಿ ಈ ಕೆಳಗಿನಂತೆ ಹಣ ಒದಗಿಸಿದೆ.

1991-92 ರಾಜ್ಯ	ಸರ್ಕಾರದ	ರೂ. 100.00 ಲಕ್ಷ
	ಕೇಂದ್ರ ಸರ್ಕಾರದ	ರೂ. 100.00 ಲಕ್ಷ
	ಒಟ್ಟು	**ರೂ. 200.00 ಲಕ್ಷ**
1990-93 ರಾಜ್ಯ	ಸರ್ಕಾರದ	ರೂ. 62.50 ಲಕ್ಷ
	ಕೇಂದ್ರ ಸರ್ಕಾರದ	ರೂ. 62.50 ಲಕ್ಷ
	ಒಟ್ಟು	**ರೂ. 125.00 ಲಕ್ಷ**

ಮುಲ್ಕಿ ಸಬ್-ರಿಜಿಸ್ಟ್ರಾರ್ ಕಛೇರಿಯ ಸ್ಥಳಾಂತರ.

275-ಶ್ರೀ ಕೆ.ಸೋಮಪ್ಪ ಸುವರ್ಣ (ಮೂಡಬಿದರೆ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಲ್ಕಿಯ ಸಬ್-ರಿಜಿಸ್ಟ್ರಾರ್ ಕಛೇರಿಯನ್ನು ಸ್ಥಳಾಂತರಿಸಲು ಕಾರಣವೇನು?

ಆ) ಈಗಿನ ಕಛೇರಿಗೆ ಕೊಡಲಾಗುತ್ತಿರುವ ಬಾಡಿಗೆ ಹಣವೆಷ್ಟು?

ಇ) ಈ ಕಟ್ಟಡದ ದುರಸ್ಥಿಗೆ ತಗುಲುತ್ತಿರುವ ಹಣವೆಷ್ಟು?

ಈ) ಇಲ್ಲಿ ಬೇರೆ ಕಟ್ಟಡ ಕಟ್ಟಿಸುವ ಆಲೋಚನೆ ಸರ್ಕಾರಕ್ಕೆ ಇದೆಯೇ?

ಉ) ಹಾಗಿದ್ದಲ್ಲಿ, ಈ ಯೋಜನೆಗಾಗಿ ತಗಲುವ ಹಣವೆಷ್ಟು?

ಊ) ಈ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) ಕಟ್ಟಡವು ಹಳೆಯದಾಗಿದ್ದು, ಬೀಳುವ ಸ್ಥಿತಿಯಲ್ಲಿದ್ದು ಉಪಯೋಗಿಸಲು ಯೋಗ್ಯವಿಲ್ಲದಿರುವ ಕಾರಣ.

ಆ) ಮಾಹಿಯಾನ ರೂ. 2,089-00 .

ಇ) ದುರಸ್ಥಿ ಮಾಡಲು ಅಸಾಧ್ಯ.

ಈ) ಹೌದು.

ಉ) ಲೋಕೋಪಯೋಗಿ ಇಲಾಖೆಯಿಂದ ನಕ್ಷೆ ಮತ್ತು ಅಂದಾಜು ಪಟ್ಟಿಗಳನ್ನು ಕರೆಯಲಾಗಿದೆ.

ಊ) ನಕ್ಷೆ ಮತ್ತು ಅಂದಾಜು ಪಟ್ಟಿಗಳನ್ನು ಅನುಮೋದಿಸಿದ ನಂತರ.

ಕಾರಂಜಿ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಸೇರಿದ ಜಮೀನನ್ನು ಬಿ.ಎಂ.ಎಸ್. ಮಹಿಳಾ ಕಾಲೇಜಿಗೆ ಗುತ್ತಿಗೆ.

992- ಶ್ರೀ ಸೋಮಪ್ಪ ಸುವರ್ಣ (ಮೂಡಬಿದರೆ): ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೆ?

ಅ) ಶ್ರೀ ಕಾರಂಜಿ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಸೇರಿದ ಜಮೀನನ್ನು ಬಿ.ಎಂ.ಎಸ್. ಮಹಿಳಾ ಕಾಲೇಜಿಗೆ ಗುತ್ತಿಗೆಗೆ ನೀಡಲಾಗಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸಚಿವ ಸಂಪುಟದ ತೀರ್ಮಾನವನ್ನು ಕೈಗೊಳ್ಳಲಾಗಿತ್ತೆ?

ಇ) ಸರ್ಕಾರವು ಬಿ.ಎಂ.ಎಸ್. ಮಹಿಳಾ ಕಾಲೇಜಿನ ಜಮೀನನ್ನು ವಿನಿಮಯ ಆಧಾರದೇ ಮೇರೆಗೆ ತೆಗೆದುಕೊಂಡ ನಂತರ ಸದರಿ ಸಂಸ್ಥೆಗೆ ವಿನಿಮಯದಿಂದ ಬಂದ ಜಮೀನನ್ನು ಗುತ್ತಿಗೆಗೆ ನೀಡಲಾಗಿದೆ ಎಂಬ ವಿಷಯವು ನಿಜವೇ?

ಈ) ಗುತ್ತಿಗೆ ಅವಧಿ?

ಉ) ಜಮೀನನ್ನು ಗುತ್ತಿಗೆಗೆ ನೀಡಲಾಗಿರುವ ಉದ್ದೇಶ

ಊ) ಗುತ್ತಿಗೆ ನೀಡಲಾಗಿರುವ ಜಮೀನಿನಲ್ಲಿ ಕೆಲವು ಅನಧಿಕೃತ ಕಟ್ಟಡಗಳ ನಿರ್ಮಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಋ) ಸರ್ಕಾರವು ಈಗ ನೀಡಲಾಗಿರುವ ಗುತ್ತಿಗೆಯನ್ನು ರದ್ದುಗೊಳಿಸಿ ಸದರಿ ಜಮೀನನ್ನು ದೇವಾಲಯದ ಉಪಯೋಗಕ್ಕೆ ಮೀಸಲಿರಿಸುವ ದಿಸೆಯಲ್ಲಿ ಕ್ರಮವನ್ನು ಕೈಗೊಳ್ಳುವುದೇ?

ಶ್ರೀ ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):

ಅ) ಹೌದು.

ಆ) ಇಲ್ಲ.

ಇ) ಹೌದು.